**ನಮ್ಮ ಉಲ್ಲೇಖ:** ಎಮ್‌ಐ01/ಪ್ರೆಸ್05/12/14ವಿಎಸ್ ಡಿಸೆಂಬರ್ 05, 2014

## ಪತ್ರಿಕಾ ಪ್ರಕಟಣೆ

## "ಅಂಗವೈಕಲ್ಯತೆಯಿರುವ ವ್ಯಕ್ತಿಗಳಿಗೆ ತೊಡಕು ರಹಿತ ವಾತಾವರಣ ನಿರ್ಮಾಣ ಮಾಡುವಲ್ಲಿ ಸಲ್ಲಿಸಿದ ಅತ್ಯುತ್ತಮ ಕೆಲಸಕ್ಕಾಗಿ" ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯದಿಂದ ಮೊಬಿಲಿಟಿ ಇಂಡಿಯಾ ಸಂಸ್ಥೆಗೆ ರಾಷ್ಟ್ರೀಯ ಪ್ರಶಸ್ತಿ.

ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯದ ಅಂಗವೈಕಲ್ಯತೆಯ ವಿಭಾಗ, ಇತ್ತೀಚೆಗಷ್ಟೇ ವೈಕಲ್ಯತೆಯುಳ್ಳ ಜನರ ಸಬಲೀಕರಣ ಕ್ಷೇತ್ರದಲ್ಲಿ 2014ರ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಪ್ರಕಟಿಸಿದ್ದು ಮೊಬಿಲಿಟಿ ಇಂಡಿಯಾವನ್ನು **'ಅಂಗವೈಕಲ್ಯತೆಯಿರುವ ವ್ಯಕ್ತಿಗಳಿಗೆ ತೊಡಕು ರಹಿತ ವಾತಾವರಣ ನಿರ್ಮಾಣ ಮಾಡುವಲ್ಲಿ ಸಲ್ಲಿಸಿದ ಅತ್ಯುತ್ತಮ ಕೆಲಸಕ್ಕಾಗಿ'** ಆಯ್ಕೆ ಮಾಡಲಾಗಿದೆ.

ಆಗಸ್ಟ್ 1994 ರಲ್ಲಿ ಪ್ರಾರಂಭವಾದ ಮೊಬಿಲಿಟಿ ಇಂಡಿಯಾ ಸಂಸ್ಥೆಯು ಒಂದು ನೋಂದಾಯಿತ ಸಂಸ್ಥೆಯಾಗಿದ್ದು, ವಿಕಲಾಂಗರ ಪುನರ್ವಸತಿ, ಅಭಿವೃದ್ಧಿ, ಸಬಲೀಕರಣ ಹಾಗೂ ಸಾಮಾಜೀಕರಣದ ಕೆಲಸಗಳಲ್ಲಿ ಮುಂಚೂಣಿಯಲ್ಲಿದೆ. ಸಮರ್ಪಕವಾದ ಆರೋಗ್ಯ ಸೇವೆ, ಶಿಕ್ಷಣ, ಜೀವನ ನಿರ್ವಹಣೆ ಮತ್ತು ಪುನರ್ವಸತಿ ಸೌಲಭ್ಯಗಳಿಂದ ನಿರ್ಲಕ್ಷಿತ ವಿಕಲಾಂಗ ಸಮುದಾಯದ ಸಾಮರ್ಥ್ಯವನ್ನು ವೃದ್ಧಿಸುವುದು ಎಂಐನ ಧ್ಯೇಯವಾಗಿದೆ.

ಮೊಬಿಲಿಟಿ ಇಂಡಿಯಾ ರಿಹ್ಯಾಬಿಲಿಟೇಶನ್ ರಿಸರ್ಚ್ ಅಂಡ್ ಟ್ರೈನಿಂಗ್ ಸೆಂಟರ್, ಬೆಂಗಳೂರಿನ ಹೃದಯಭಾಗದಲ್ಲಿರುವ ಮೂರು ಮಹಡಿಗಳ ಕಟ್ಟಡವಾಗಿದೆ. ಸೇವಾಲಭ್ಯತೆ, ಪುನರ್ವಸತಿ ಹಾಗೂ ತರಬೇತಿಯ ವಿಚಾರಗಳಲ್ಲಿ ಸಂಸ್ಥೆಯು ಅಂತರರಾಷ್ಟ್ರೀಯ ಗುಣಮಟ್ಟವನ್ನು ಹೊಂದಿದೆ. ಇಲ್ಲಿ ಬ್ರೈಲ್ ಲಿಪಿಯಲ್ಲಿ ಸಹಿ ಮಾಡುವುದು, ಸ್ಪರ್ಶಸಂವೇದಿ ನೆಲ, ಅನುಕೂಲಕರ ಆಸನಗಳು, ಲಿಫ್ಟ್‌ನಲ್ಲಿ ಶ್ರವಣ ಸಂಕೇತಗಳು ಮತ್ತು ವಿಕಲಾಂಗರಿಗೆ ಅನುಕೂಲವಾಗುವಂತಹ ಬಣ್ಣದ ಸಂಕೇತಗಳು ಮುಂತಾದ ವ್ಯವಸ್ಥೆಗಳಿವೆ. ಕಟ್ಟಡವು ಯಾವುದೇ ರೀತಿಯ ಅಂಗವೈಕಲ್ಯತೆ ಉಳ್ಳವರಿಗೂ ತಲುಪಲು ಸುಲಭವಾಗಿದ್ದು ಮೊಬಿಲಿಟಿ ಇಂಡಿಯಾ "ವಿಕಲಾಂಗರು ಸಮಾಜದ ಅವಿಭಾಜ್ಯ ಅಂಗವಾಗಿದ್ದು ಶಿಕ್ಷಣ, ಆರೋಗ್ಯ, ಜೀವನನಿರ್ವಹಣೆ ಮುಂತಾದ ಸೌಲಭ್ಯಗಳನ್ನು ಪಡೆದುಕೊಂಡು ಉತ್ತಮ ಗುಣಮಟ್ಟದ ಜೀವನ ನಡೆಸಲು ಎಲ್ಲರಂತೆ ಸಮಾನ ಹಕ್ಕುಳ್ಳವರು" ಎಂಬ ತತ್ವವನ್ನು ಪ್ರತಿಬಿಂಬಿಸುತ್ತದೆ.

ಮೊಬಿಲಿಟಿ ಇಂಡಿಯಾದ ನಿರ್ದೇಶಕರಾದ ಶ್ರೀಮತಿ ಅಲ್ಬಿನಾ ಶಂಕರ್ ಅವರ ಪ್ರಕಾರ, "ಈ ಪ್ರಶಸ್ತಿ ನಮಗೆ ಬಂದಿರುವುದು ನಮ್ಮ ಪ್ರಾಮಾಣಿಕ ಪರಿಶ್ರಮಕ್ಕೆ ಸಿಕ್ಕ ಮನ್ನಣೆಯಾಗಿದೆ. ನಮ್ಮ ಸಂಸ್ಥೆಯ 20ನೇ ವರ್ಷಾಚರಣೆಯಲ್ಲಿ ಇದು ಬಂದಿರುವುದು ಪ್ರಶಸ್ತಿಗೆ ಇನ್ನೂ ಹೆಚ್ಚಿನ ವಿಶೇಷತೆಯನ್ನು ನೀಡಿದೆ". ಅವರು ಹೇಳುವಂತೆ, "ಅಂತರರಾಷ್ಟ್ರೀಯ ವಿಕಲಾಂಗರ ದಿನಾಚರಣೆಯ 2014ರ ಧ್ಯೇಯ ಏನೆಂದರೆ "ಸಮರ್ಥನೀಯ ಅಭಿವೃದ್ಧಿ: ತಂತ್ರಜ್ಞಾನದ ಭರವಸೆ" ಮತ್ತು ಕೇಂದ್ರ ವಿಷಯವೆಂದರೆ 'ಸಶಕ್ತ ಕಾರ್ಯಸ್ಥಳದ ವಾತಾವರಣಗಳ ಸೃಷ್ಟಿ'. ಈ ದಿಕ್ಕಿನಲ್ಲಿ ಮುಂದುವರೆಯಲು ಮೊಬಿಲಿಟಿ ಇಂಡಿಯಾ ಹಲವಾರು ವರ್ಷಗಳಿಂದಲೂ ಪರಿಶ್ರಮಪಟ್ಟಿದೆ. 'ತೊಡಕು ರಹಿತ ಪರಿಸರ ನಿರ್ಮಾಣ'ದಲ್ಲಿ ಮೊಬಿಲಿಟಿ ಇಂಡಿಯಾದ ಪಾತ್ರವನ್ನು ಸೂಕ್ತಸಮಯದಲ್ಲಿ ಗುರುತಿಸಿ ಗೌರವಿಸಲಾಗಿದೆ. ಸಮಾಜದಲ್ಲಿ ವಿಕಲಾಂಗರ ಸಮಾನ ಭಾಗವಹಿಸುವಿಕೆಗಾಗಿ ಶ್ರಮಿಸುವ ನಮ್ಮ ಕೆಲಸವನ್ನು ಹೀಗೆಯೇ ಮುಂದುವರೆಸುತ್ತೇವೆ.

ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಪ್ರಣಬ್ ಮುಖರ್ಜಿಯವರು ಡಿಸೆಂಬರ್ 03, 2014 ರಂದು, ಅಂತರರಾಷ್ಟ್ರೀಯ ಅಂಗವಿಕಲರ ದಿನಾಚರಣೆಯ ಅಂಗವಾಗಿ, ನವದೆಹಲಿಯ ವಿಜ್ಞಾನ ಭವನದಲ್ಲಿ ಪ್ರದಾನ ಮಾಡಿದರು.